ಕರ್ನಾಟಕ ವಿಧಾನಸಭೆ

ಸೋಮವಾರ 21ನೇ ಮಾರ್ಚ್ 2005 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 11-05 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ: ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಉಡುಪಿಯಲ್ಲಿ ಪಾಕಿಸ್ತಾನ ಧ್ವಜಗಳನ್ನು ಇಟ್ಟುಕೊಂಡು ಘೋಷಣೆ ಕೂಗಿರುವುದರ ಬಗ್ಗೆ.

ಶ್ರೀ ಮಾರಿಹಾಳ ಸುರೇಶ ಶಿವರುದ್ರಪ್ಪ: ಮಾನ್ಯ ಅಧ್ಯಕ್ಷರೇ, ನಿನ್ನೆ ಉಡುಪಿಯಲ್ಲಿ ಪಾಕಿಸ್ತಾನದ ಧ್ವಜಗಳನ್ನು ಇಟ್ಟುಕೊಂಡು 'ಪಾಕಿಸ್ತಾನ ಜಿಂದಾಬಾದ್' ಎಂದು ಘೋಷಣೆಗಳನ್ನು ಕೂಗುತ್ತಾ, ರಾಷ್ಟ್ರ ವಿರೋಧಿ ಚಟುವಟಿಕೆಗಳಲ್ಲಿ.....

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ, ಈಗ ಏನಿದ್ದರೂ ಪ್ರಶ್ನೋತ್ತರ ವೇಳೆ ಆದ ಮೇಲೆಯೇ ಕೇಳಬೇಕು.

ಶ್ರೀ ಮಾರಿಹಾಳ ಸುರೇಶ್ ಶಿವರುದ್ರಪ್ಪ: ಪಾಕಿಸ್ತಾನದ ಧ್ವಜಗಳನ್ನು ಇಟ್ಟುಕೊಂಡು ರಾಜ್ಯದಲ್ಲಿ ಭಾರಿ ಮೆರವಣಿಗೆಗಳನ್ನು ಮಾಡಿದ್ದಾರೆ, ಇದು ಬಹಳ ಗಂಭೀರವಾದ ವಿಷಯವಾಗಿದೆ, ದಯಮಾಡಿ ಅವಕಾಶವನ್ನು ಮಾಡಿಕೊಡಬೇಕು. ಈ ರೀತಿ ರಾಜರೋಷವಾಗಿ ರಾಜ್ಯದಲ್ಲಿ ಪಾಕಿಸ್ತಾನದ ಧ್ವಜಗಳನ್ನು ಇಟ್ಟುಕೊಂಡು ಕೂಗಾರಿಕೊಂಡು ಹೋಗುತ್ತಾರೆ ಎಂದರೆ ಸರ್ಕಾರ ಯಾಕೆ ಸುಮ್ಮನೆ ಕುಳಿತಿದೆ?

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.: ಉದಯವಾಣಿಯಲ್ಲಿ ಅದರ ಬಗ್ಗೆ ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ, ಅದರ ಬಗ್ಗೆ ಚರ್ಚೆ ಮಾಡಬಾರದು.

(ಗೊಂದಲ)

ಅಧ್ಯಕ್ಷರು: ದಯಮಾಡಿ ಕುಳಿತುಕೊಳ್ಳಿ, ನಿಮಗೆ ನೀತಿ ಇಲ್ಲ, ನಿಯಮ ಇಲ್ಲ, ಯಾವಾಗ ಬೇಕಾದರೂ ನಿಂತುಕೊಂಡು ಬಾಯಿಗೆ ಬಂದಂತೆ ಮಾತನಾಡುತ್ತಿರುವುದು. ನೋಡಿ ವಿಶ್ವೇಶ್ವರ ಹೆಗಡೆಯವರೆ, ನಿಮ್ಮ ಸದಸ್ಯರುಗಳಿಗೆ ಹೇಳಿ, ಅವರು, ನೀತಿ ನಿಯಮಗಳನ್ನು ಪಾಲಿಸುವುದಿಲ್ಲ, ಬರೇ ಹುಮ್ಮಸ್ಸು, ಅವರು ನನ್ನ ಚೇಂಬರ್‌ಗೆ ಬಂದು ಮಾತನಾಡಲು ಅವಕಾಶ ಕೇಳಿದ್ದಕ್ಕೆ ನಾನು ಅವಕಾಶವನ್ನು ಕೊಡುತ್ತೇನೆಂದು ಹೇಳಿದ್ದರೂ ಅವರು ಈಗ ನಿಂತುಕೊಂಡು ಮಾತನಾಡುತ್ತಿದ್ದರೆ ನಾನು ಅವರಿಗೆ ಏನು ಮಾಡಬೇಕಾಗುತ್ತದೆ? ಸೀರಿಯಸ್ಸಾಗಿ ವ್ಯೂ ಮಾಡಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್: ಅವರಿಗೆ ಮಾತನಾಡಲಿಕ್ಕೆ ನಿಯಮಾವಳಿ ಏನೂ ಬೇಡವೇ? ಪ್ರಶ್ನೋತ್ತರ ಆದ ನಂತರ ಶೂನ್ಯ ವೇಳೆ ಬರುತ್ತದೆ. ಯಾವಾಗ ಬೇಕಾದರೂ ಎದ್ದು ನಿಂತು ಮಾತನಾಡುವುದು ಸರಿಯಲ್ಲ.

ಅಧ್ಯಕ್ಷರು: ನಿಮ್ಮ ಸದಸ್ಯರುಗಳಿಗೆ ಮೊದಲು ಸಭಾ ನಿಯಮಗಳನ್ನು ಪಾಲನೆ ಮಾಡುವುದನ್ನು ಕಲಿತುಕೊಳ್ಳಲಿಕ್ಕೆ ಹೇಳಿ. ಯಾವ ಸಮಯದಲ್ಲಿ ಎತ್ತಬೇಕೋ ಆಗ ಆ ವಿಷಯದ ಬಗ್ಗೆ ಪ್ರಸ್ತಾಪ ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಈ ವಿಷಯ ಗಂಭೀರವಾಗಿರುವುದರಿಂದ ಪ್ರಶ್ನೋತ್ತರ ವೇಳೆಯ ನಂತರ ಅವಕಾಶವನ್ನು ಕೊಡಬೇಕು.

2. ಪ್ರಶ್ನೋತರಗಳು

ವಿಷಯ: ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 196(2713)

(ಮಾನ್ಯ ಸದಸ್ಯರು ಗೈರುಹಾಜರಿದ್ದರು)

ಶ್ರೀ ಜೆ.ಸಿ. ಮಾಧುಸ್ವಾಮಿ: ಪ್ರಶ್ನೆ ಸಂಖ್ಯೆ 2713 ರಲ್ಲಿರುವ ವಿಷಯವನ್ನು ಏನಾದರೂ ಮಾಡಿ ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಬೇಕು ಅಧ್ಯಕ್ಷರೇ, ಎಲ್ಲರಿಗೂ ಆಸಕ್ತಿಯಿರುವ ಬಹಳ ಗಂಭೀರವಾದ ವಿಷಯವಾಗಿದೆ.

ಅಧ್ಯಕ್ಷರು: ಆಗಬಹುದು, ಪ್ರಕಾಶ್‌ರವರೇ, ಈ ಪ್ರಶ್ನೆಯನ್ನು ಅರ್ಧ ಗಂಟೆಯ ಚರ್ಚೆಗೆ ಬದಲು ಮಾಡಬಹುದೇ?

ಶ್ರೀ ಎಂ.ಪಿ. ಪ್ರಕಾಶ್: ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ಅನೇಕ ಸದಸ್ಯರು ಒಪ್ಪುತ್ತಾರೆ, ಆದಕಾರಣ ಇದನ್ನು ಅರ್ಧ ಗಂಟೆ ಚರ್ಚೆಗೆ ಬದಲು ಮಾಡಲಿಕ್ಕೆ ತಾವು ಒಪ್ಪುವುದಾದರೆ ನಮ್ಮದೇನೂ ಆಕ್ಷೇಪಣೆ ಇಲ್ಲ.

ಅಧ್ಯಕ್ಷರು: ಆಯಿತು, ಹಾಗಿದ್ದರೆ ಅರ್ಧಗಂಟೆ ಚರ್ಚೆಗೆ ಈ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 197(2919), 198(2712) ಮತ್ತು 199(2792)

(ಮಾನ್ಯ ಸದಸ್ಯರುಗಳು ಸದನದಲ್ಲಿ ಹಾಜರಿರಲಿಲ್ಲ)

ರಾಜ್ಯದಲ್ಲಿ 'ವ್ಯಾಟ್' ತೆರಿಗೆ ಪದ್ಧತಿ ಜಾರಿ

200 (2796) ಶ್ರೀ ಬಸವಣ್ಣೆಪ್ಪ ಜಿ. (ಹೊಳೆಹೊನ್ನೂರು): ಮಾನ್ಯ ಉಪಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 'ವ್ಯಾಟ್' ತೆರಿಗೆ ಪದ್ಧತಿ ಎಂದಿನಿಂದ ಜಾರಿಗೆ ಬರುವುದು;

ಆ) ಈ ಪದ್ಧತಿಯಿಂದ ಒಂದು ವೇಳೆ ನಷ್ಟ ಉಂಟಾಗುವುದಾದರೆ ಇದರ ಪ್ರಮಾಣ ಎಷ್ಟು;

ಇ) ಈ ನಷ್ಟವನ್ನು ಕೇಂದ್ರ ಸರ್ಕಾರ ಭರಿಸುವುದೇ: ಹಾಗಿದ್ದಲ್ಲಿ, ವಿವರಗಳನ್ನು ನೀಡುವುದು;